

ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ (ರಿ.)

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು



# ಸಂಗೀತ ತ್ರಿಮೂರ್ತಿಗಳ ಸಂಸ್ಮರಣೆ

ದಿವ್ಯಾಶೀರ್ವಾದ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

**ಶ್ರೀ ಶ್ಯಾಮಾ ಶಾಸ್ತ್ರಿಗಳು, ಶ್ರೀ ತ್ಯಾಗರಾಜರು ಮತ್ತು ಶ್ರೀ ಮುತ್ತುಸ್ವಾಮಿ ದೀಕ್ಷಿತರ ಕೃತಿಗಳ ಗಾಯನ**

ಪ್ರಸ್ತುತಿ : ಸುರಭಿ ಗಾನ ಕಲಾ ಮಂದಿರದ ಕಲಾವಿದರು

**ಪರಿಕಲ್ಪನೆ : ವಿದುಷಿ ಡಾ. ಸುಕನ್ಯಾ ಪ್ರಭಾಕರ್**

**ವಯೊಲಿನ್ : ವಿದುಷಿ ಎಸ್.ಎ. ದಿವ್ಯಶ್ರೀ**

**ಮೃದಂಗ : ವಿದ್ವಾನ್ ಶುಭಾಂಗ್ ಬಿ.ಎಸ್.**

**12 ಏಪ್ರಿಲ್ 2026 * ಭಾನುವಾರ * ಸಂಜೆ 6.00**
**ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು**
**ಸರಸ್ವತಿಪುರಂ, ಮೈಸೂರು**

ಸಂಗೀತ ಪ್ರೇಮಿಗಳೆಲ್ಲರಿಗೂ ಆದರದ ಸ್ವಾಗತ

ಪ್ರಾಯೋಜಕರು : **ಜಯಂ ಸೈಂಟಿಫಿಕ್ ಕಂ, ಕೊಯಮತ್ತೂರು**

Sponsored by : **Jayam Scientific Co., Coimbatore**

**ಲಘು ಉಪಾಹಾರ : ಸಂಜೆ 5.30**



**ವಿದುಷಿ ಡಾ. ಸುಕನ್ಯಾ ಪ್ರಭಾಕರ್**ರವರಿಗೆ ತಾಯಿಯೇ ಮೊದಲ ಗುರುಗಳು. ವಿದ್ವಾಂಸರುಗಳಾದ ಡಾ. ಗೌರೀಕುಪ್ಪುಸ್ವಾಮಿ, ಪ್ರೊ. ವಿ. ರಾಮರತ್ನಂ, ವಿ. ನಾಗರತ್ನ ಸದಾಶಿವ ಇವರೆಲ್ಲರ ಮಾರ್ಗದರ್ಶನದಲ್ಲಿ ಬೆಳೆದವರು. 2001ರಲ್ಲಿ 'ಕರ್ನಾಟಕ ಸಂಗೀತ ಕ್ಷೇತ್ರಕ್ಕೆ ಶ್ರೀ ಜಯಚಾಮರಾಜೇಂದ್ರ ಒಡೆಯರ ಕೊಡುಗೆ' ಎಂಬ ಪ್ರೌಢ ಪ್ರಬಂದಕ್ಕೆ ಡಾಕ್ಟರೇಟ್ ಪದವಿ ಪಡೆದರು. ಆಕಾಶವಾಣಿ ಮತ್ತು ದೂರದರ್ಶನದ 'ಎ' ಟಾಪ್ ಗ್ರೇಡ್ ಕಲಾವಿದರು. ಆಕಾಶವಾಣಿಗಾಗಿ ಹಲವಾರು ಸಂಗೀತ ರೂಪಕಗಳ ಸರಣಿಯನ್ನೇ ಪ್ರಸ್ತುತಪಡಿಸಿದ್ದಾರೆ.

ಸ್ವರಮಾಧುರ್ಯ, ಗಮಕ ಪ್ರಯೋಗಗಳಲ್ಲಿನ ಪ್ರೌಢಿಮೆ, ನೆರವಲುಗಳಲ್ಲಿನ ನೈಪುಣ್ಯತೆ, ರಾಗಭಾವಗಳ ರಸಭಾವ ಪ್ರವಾಹ, ಲೀಲಾಜಾಲವಾದ ಶಾರೀರ ಸಂಚಾರ, ಸಾಹಿತ್ಯದ ಅನನ್ಯ ಭಾವಾಭಿವ್ಯಕ್ತಿ ಇವು ಇವರ ಗಾಯನದಲ್ಲಿನ ವಿಶೇಷತೆ.

ಮದ್ರಾಸ್ ಮ್ಯೂಸಿಕ್ ಅಕಾಡೆಮಿಯಿಂದ ಎರಡು ಬಾರಿ ಸನ್ಮಾನ. 2005ರಲ್ಲೇ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಹಲವು ಸಂಸ್ಥೆಗಳಿಂದ 'ಗಾನಕೋಗಿಲೆ', 'ಗಾನಸರಸ್ವತಿ', 'ಗಾನಕಲಾಶ್ರೀ', 'ಹರಿದಾಸ ಪ್ರಶಸ್ತಿ' ಮುಂತಾದ ಗೌರವಗಳಿಗೆ ಭಾಜನರಾಗಿದ್ದಾರೆ.

ಮೈಸೂರಿನಲ್ಲಿ ಸುರಭಿ ಗಾನಕಲಾಮಂದಿರ ಎಂಬ ಸಂಸ್ಥೆಯನ್ನು ಸ್ಥಾಪಿಸಿ ಹಲವಾರು ಉನ್ನತ ಮಟ್ಟದ ಕಲಾವಿದೆಯರನ್ನು ಸಂಗೀತ ಕ್ಷೇತ್ರಕ್ಕೆ ನೀಡಿದ್ದಾರೆ.



**ವಿದುಷಿ ಎಸ್. ಎ ದಿವ್ಯಶ್ರೀ**ರವರು ಡಾ. ಮೈಸೂರು ಎಂ. ಮಂಜುನಾಥ್ ಅವರ ಶಿಷ್ಯರು. ಕರ್ನಾಟಕ ಸಂಗೀತ ಗಾಯನ ಪ್ರೌಢ ದರ್ಜೆ ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್ ಗಳಿಸಿದ ಹೆಗ್ಗಳಿಕೆ ಇವರದ್ದಾಗಿದೆ. ಈಗ ಮೈಸೂರಿನಲ್ಲಿ ನೆಲೆಸಿರುವ ಇವರು ನಾಡಿನ ಹಲವಾರು ಹಿರಿಯ ಸಂಗೀತ ವಿದ್ವಾಂಸರ ಕಛೇರಿಗಳಿಗೆ ವೈಲಿನ್ ಸಹಕಾರ ನೀಡುತ್ತಿದ್ದಾರೆ. ಅಲ್ಲದೆ ಮೈಸೂರು ಆಕಾಶವಾಣಿ ಕೇಂದ್ರದಲ್ಲಿ ಪ್ರಸಾರ ಸಹಾಯಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ



**ವಿದ್ವಾನ್ ಶುಭಾಂಗ್ ಬಿ.ಎಸ್**ರವರು ಮೂಲ ಶಿಕ್ಷಣವನ್ನು ವಿದ್ವಾನ್ ಹೆಚ್.ಎಲ್ ಶಿವಶಂಕರಸ್ವಾಮಿ ಅವರಲ್ಲಿ 10 ವರ್ಷಗಳ ಕಾಲ ಕಲಿತು, ಈಗ ಹೆಚ್ಚಿನ ಅಭ್ಯಾಸವನ್ನು ಗಾನಕಲಾಭೂಷಣ ವಿದ್ವಾನ್ ಜಿ.ಎಸ್ ರಾಮಾನುಜಮ್‌ರವರ ಬಳಿ ಹಾಗೂ ಚೆನ್ನೈನ ಹೆಸರಾಂತ ಮೃದಂಗ ವಿದ್ವಾಂಸರಾದ ಕಲೈಮಾಮಣಿ, ದೆಹಲಿ ಸಾಯಿರಾಮ್‌ರವರ ಬಳಿ ಅಭ್ಯಾಸ ಮಾಡುತ್ತಿದ್ದಾರೆ. ಅಲ್ಲದೆ ಇವರು ಕ್ಯೂಸ್ಟ್ರಾಟ್ ಕಂಪೆನಿಯಲ್ಲಿ ಸಾಫ್ಟವೇರ್ ಇಂಜಿನಿಯರ್ ಆಗಿಯೂ ಕೆಲಸ ಮಾಡುತ್ತಿದ್ದಾರೆ.